# ಜಾವೆಲಿನ್ ಲೋಕದಲ್ಲಿ ಕನ್ನಡತಿ ಕರಿಷ್ಮಾ




■ **ವಿಜಯಕುಮಾರ್ ಎಚ್.ಕೆ.**

ಉಡುಪಿ ಜಿಲ್ಲೆ ಅನೇಕ ಪ್ರತಿಭೆಗಳ ತವರು. ಇದೇ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಬಾರ್ಕೂರು ಎಂಬ ಐತಿಹಾಸಿಕ ಗ್ರಾಮದ ಕರಿಷ್ಮಾ ಎಸ್. ಸನಿಲ್ ಕೂಡ ಆ ಸಾಲಿಗೆ ಸೇರುವ ಹಂಬಲದಲ್ಲಿದ್ದಾರೆ.

ಜಾವೆಲಿನ್ ಎಸೆತದಲ್ಲಿ ಸಾಧಿಸಲು ಹೊರಟಿರುವ ಕರಿಷ್ಮಾ ಅವರ ತಂದೆ ಸುದರ್ಶನ್ ಸನಿಲ್ ಮತ್ತು ತಾಯಿ ಇಂದಿರಾ. ಇಂದಿರಾ ಅವರು ವೃತ್ತಿಯಲ್ಲಿ ಶಿಕ್ಷಕಿಯಾಗಿದ್ದು, ಮಗಳಿಗೆ ಶಿಸ್ತು ಮತ್ತು ಸಮಯಪ್ರಜ್ಞೆಯನ್ನು ಬಾಲ್ಯದಿಂದಲೇ ಕಲಿಸಿಕೊಟ್ಟರು. ಕ್ರೀಡೆಯಲ್ಲಿ ಕರಿಷ್ಮಾ ಅವರಿಗೆ ಪೋಷಕರು ಬೆಂಬಲಕ್ಕೆ ನಿಂತರು.

ಬಾರ್ಕೂರಿನ ಸಂತೆಗುಡ್ಡೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಓದು ಆರಂಭಿಸಿದ ಅವರ ದೈಹಿಕ ಸಾಮರ್ಥ್ಯ ಮತ್ತು ಕ್ರೀಡಾ ಆಸಕ್ತಿ ಶಿಕ್ಷಕರ ಗಮನಸೆಳೆದಿತ್ತು. ಆರಂಭದಲ್ಲಿ ಶಾಟ್‌ಪಟ್, ಡಿಸ್ಕಸ್ ಥ್ರೋ, ಜಾವೆಲಿನ್ ಮೂರೂ ವಿಭಾಗಗಳಲ್ಲಿ ಸ್ಪರ್ಧಿಸುತ್ತಿದ್ದರು ಕರಿಷ್ಮಾ. ವಾಲಿಬಾಲ್ ಕೂಡ ಆಡುತ್ತಿದ್ದರು. ಶಾಲೆಯಲ್ಲಿ ವಾಲಿಬಾಲ್ ತಂಡದ ನಾಯಕಿಯಾಗಿ ತಂಡವನ್ನು ಜಿಲ್ಲಾ ಮತ್ತು ರಾಜ್ಯ ಮಟ್ಟದವರೆಗೆ ಮುನ್ನಡೆಸಿದ ಕೀರ್ತಿ ಇವರದ್ದು. ಇದು ಅವರಲ್ಲಿ ನಾಯಕತ್ವದ ಗುಣ ಮತ್ತುಸಂಘಟನಾ ಶಕ್ತಿಯನ್ನು ಬೆಳೆಸಿತು.

ಹೈಸ್ಕೂಲ್ ಶಿಕ್ಷಣಕ್ಕಾಗಿ ಬ್ರಹ್ಮಾವರದ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಸೇರಿದಾಗ ಕರಿಷ್ಮಾ ಅವರಲ್ಲಿನ ಕ್ರೀಡಾ ಉತ್ಸಾಹ ಇನ್ನಷ್ಟು ಗರಿಗೆದರಿತು. 8ನೇ ತರಗತಿಯಲ್ಲಿದ್ದಾಗ ಕಾಲೇಜಿನ ಪರವಾಗಿ ಕ್ರೀಡಾಕೂಟಗಳಲ್ಲಿ ಭಾಗವಹಿಸಿ, ಶಾಟ್‌ಪಟ್ ವಿಭಾಗದಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದರು. ಜಿಲ್ಲಾ ಮಟ್ಟದಲ್ಲಿ 9.85 ಮೀಟರ್ ದೂರಕ್ಕೆ ಜಾವೆಲಿನ್ ಎಸೆಯುವ ಮೂಲಕ ಗೆಲುವು ಸಾಧಿಸಿದರು. 9ನೇ ತರಗತಿಯಲ್ಲಿ ಶಾಟ್‌ಪಟ್ ಮತ್ತು ಜಾವೆಲಿನ್ ಎರಡೂ ವಿಭಾಗಗಳಲ್ಲಿ ತೊಡಗಿಕೊಂಡ ಅವರು ಜಿಲ್ಲಾ ಮಟ್ಟದ ಜಾವೆಲಿನ್ ಎಸೆತದಲ್ಲಿ ದ್ವಿತೀಯ ಸ್ಥಾನ ಗಳಿಸಿದರು. ಈ ಗೆಲುವು ಅವರಿಗೆ ತಮ್ಮ ಶಕ್ತಿ ಜಾವೆಲಿನ್ ಕ್ರೀಡೆಯಲ್ಲಿದೆ ಎಂಬ ಅರಿವು ಮೂಡಲು ಕಾರಣವಾಯಿತು. 10ನೇ ತರಗತಿಯಲ್ಲಿ ಹವ್ಯಾಸಿ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಉತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಪಡೆದ ಕರಿಷ್ಮಾ, ನಂತರ ಆಂಧ್ರಪ್ರದೇಶದಲ್ಲಿ ನಡೆದ ದಕ್ಷಿಣ ವಲಯ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಪಡೆದರು.

ಮೊದಲ ಬಾರಿಗೆ ರಾಷ್ಟ್ರೀಯ ಮಟ್ಟದ ವೇದಿಕೆಯಲ್ಲಿ ಕರ್ನಾಟಕದ ಬಾವುಟವನ್ನು ಹೆಮ್ಮೆಯಿಂದ ಹಾರಿಸಿ ಅಂತರರಾಷ್ಟ್ರೀಯ ಪಯಣಕ್ಕೆ ಭದ್ರ ಬುನಾದಿ ಹಾಕಿಕೊಂಡರು.

ರಾಯಚೂರಿನ ಎಲ್‌ವಿಡಿ ಕಾಲೇಜಿನಲ್ಲಿ ಬಿ.ಎಸ್ಸಿ ಪದವಿ ವ್ಯಾಸಂಗ ಮಾಡಿದ ಅವರು 2016ರಲ್ಲಿ ಕೇರಳದ ಕಲ್ಲಿಕೋಟೆಯಲ್ಲಿ ನಡೆದ 61ನೇ ರಾಷ್ಟ್ರೀಯ ಶಾಲಾ ಕ್ರೀಡಾಕೂಟದಲ್ಲಿ ಭಾಗವಹಿಸಿದರು. ಅಲ್ಲಿ ಅವರು 37.45 ಮೀಟರ್ ಜಾವೆಲಿನ್ ಎಸೆದು ಚಿನ್ನದ ಪದಕ ಗೆದ್ದರು. ಈ ಗೆಲುವು ಅವರಿಗೆ ಟರ್ಕಿಯ ಟ್ರಾಬ್ಜಾನ್‌ನಲ್ಲಿ ನಡೆದ ವಿಶ್ವ ಶಾಲಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸುವ ಟಿಕೆಟ್ ನೀಡಿತು.

ಮೊದಲ ಬಾರಿಗೆ ಅಂತರರಾಷ್ಟ್ರೀಯ ಅಂಗಳಕ್ಕೆ ಇಳಿದಾಗ ಅವರಿಗೆ ಸಿಕ್ಕ ಅನುಭವ ಅಪಾರ. ಯಾವುದೇ ಸಾಧನೆಯ ಹಿಂದೆ ಒಬ್ಬ ಶ್ರೇಷ್ಠ ಗುರುವಿನ ಹಸ್ತವಿರುತ್ತದೆ. ಕರಿಷ್ಮಾ ಅವರ ವಿಷಯದಲ್ಲಿ ಅದು ವೆಂಕಟೇಶ್ ಭಟ್, ಸತ್ಯನಾರಾಯಣ ನಾಯಕ್ ಮತ್ತು ಕಾಶೀನಾಥ್ ನಾಯಕ್. ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ ಅವರಿಗೆ ಡಿಫೆನ್ಸ್ ಅಕಾಡೆಮಿಯಲ್ಲಿ ಕೆಲಕಾಲ ಮಾರ್ಗದರ್ಶನ ಮಾಡಿದ್ದ ಕನ್ನಡಿಗ ಕಾಶೀನಾಥ್ ನಾಯಕ್ ಅವರು ಕರಿಷ್ಮಾ ಅವರಿಗೆ ಬೆಂಬಲವಾಗಿ ನಿಂತರು.

2021ರಲ್ಲಿ ನವದೆಹಲಿಯಲ್ಲಿ ನಡೆದ 'ರಾಷ್ಟ್ರೀಯ ಅಂಡರ್ 23 ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್'ನೊಂದಿಗೆ ಅವರ ಕ್ರೀಡಾ ಬದುಕು ಹೊಸ ವೇಗ ಪಡೆಯಿತು. ಅಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ರಾಷ್ಟ್ರೀಯ ಮಟ್ಟದಲ್ಲಿ ಮಿಂಚಿದರು. ತದನಂತರ, 2023ರಲ್ಲಿ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್‌ನಲ್ಲಿ ಕಂಚಿನ ಪದಕ ತಮ್ಮದಾಗಿಸಿಕೊಂಡರು. ದುಬೈನಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್ ಭಾಗವಾದ ಯುಎಇ ಅಂತರರಾಷ್ಟ್ರೀಯ ಅಥ್ಲೆಟಿಕ್ಸ್ ವಿಮೆನ್ಸ್ ಗಾಲಾ ಕೂಟದಲ್ಲಿ ಅವರು 53.33 ಮೀಟರ್ ದೂರಕ್ಕೆ ಜಾವೆಲಿನ್ ಎಸೆಯುವ ಮೂಲಕ ಬಂಗಾರದ ಪದಕ ಪಡೆದರು. 2025 ರಂದು ನಡೆದ ಕ್ರೀಡಾಕೂಟದಲ್ಲಿ ಕರಿಷ್ಮಾ ಅವರು 55.55 ಮೀಟರ್ ಜಾವೆಲಿನ್ ಎಸೆಯುವ ಮೂಲಕ ದಾಖಲೆ ಬರೆದರು. ಈ ಪ್ರದರ್ಶನವು ಅವರನ್ನು ವಿಶ್ವ ಶ್ರೇಯಾಂಕದಲ್ಲಿ ಅಗ್ರಸ್ಥಾನದತ್ತ ಕೊಂಡೊಯ್ದಿದೆ. ಕರಿಷ್ಮಾ ಅವರ ಕ್ರೀಡಾಸಾಧನೆ ಗುರುತಿಸಿ ನೈಋತ್ಯ ರೈಲ್ವೆ ಅವರಿಗೆ ಉದ್ಯೋಗ ನೀಡಿದೆ. ಪ್ರಸ್ತುತ ಅವರು ಬೆಂಗಳೂರಿನಲ್ಲಿ ರೈಲ್ವೆ ಉದ್ಯೋಗಿಯಾಗಿ ಕೆಲಸ ಮಾಡುತ್ತಾ ಇಲಾಖೆಯ ಪರವಾಗಿ ಅಥ್ಲೆಟಿಕ್ಸ್ ಕೂಟಗಳಲ್ಲಿ ಭಾಗವಹಿಸುತ್ತಿದ್ದಾರೆ.

ಜಾವೆಲಿನ್ ಎಸೆತವು ಕೇವಲ ತೋಳಿನ ಶಕ್ತಿಯಲ್ಲ, ಅದು ವಿಜ್ಞಾನ. ಕರಿಷ್ಮಾ ಅವರು ತಮ್ಮ ತರಬೇತುದಾರರ ಸಲಹೆಯಂತೆ ರನ್‌ಅಪ್ ವೇಗ ಮತ್ತು ಜಾವೆಲಿನ್ ಬಿಡುಗಡೆಯ ಕೋನದ ಮೇಲೆ ಹೆಚ್ಚಿನ ಗಮನಹರಿಸಿದ್ದಾರೆ. ಕರಿಷ್ಮಾ ಅವರ ಈಗಿನ ಗುರಿ ಏಷ್ಯನ್ ಗೇಮ್ಸ್ ಮತ್ತು ಮುಂದಿನ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸುವುದು. ■